


ದೆಹಲಿಯಲ್ಲಿ ನಡೆದ ರಿಪಬ್ಲಿಕ್ ಕ್ಯಾಂಪ್(ಆರ್‌ಡಿಸಿ)ನಲ್ಲಿ ನಮ್ಮ ಸ್ನೇಹ ಚಿಗುರಿದ್ದು. ಕರ್ನಾಟಕದಿಂದ ನಾನು ಹೋಗಿದ್ದೆ. ಕೇರಳದಿಂದ ಜಯಂತನ್ ಬಂದಿದ್ದ. ಒಂದು ತಿಂಗಳಲ್ಲಿ ನಮ್ಮಿಬ್ಬರ ಸ್ನೇಹ ಗಾಢವಾಗಿತ್ತು. ಜಯಂತನ್ ಆರ್ಮಿ ಸೇರುವ ಕನಸಿಟ್ಟುಕೊಂಡವ. ನನಗೋ ಮೊದಲಿನಿಂದಲೂ ಆರ್ಮಿ ಮೇಲೆ ಮೋಹ.

ಅಲ್ಲಿಂದ ಬಂದ ಮೇಲೆ ನಮ್ಮಿಬ್ಬರ ನಡುವೆ ಸಂಪರ್ಕವೇ ಕಡಿದುಹೋಯಿತು. ನಾವು ಫೋನ್ ನಂಬರ್ ಸಹ ಬದಲಿಸಿಕೊಂಡಿರಲಿಲ್ಲ. ಒಂದಿನ ಹೀಗೇ ಸುಮ್ಮನೇ ಫೇಸ್‌ಬುಕ್‌ನಲ್ಲಿ ತಡಕಾಡುತ್ತಿರುವಾಗ ಫ್ರೆಂಡ್ ರಿಕ್ವೆಸ್ಟ್ ಕಳಿಸಿದವರ ಲಿಸ್ಟ್‌ನಲ್ಲಿ ಜಯಂತನ್ ಫೋಟೊ ನೋಡಿ ಖುಷಿಯಾಯಿತು. ಬಹುತೇಕ ಒಂದು ವರ್ಷ ಕಳೆದ ಮೇಲೆ ಸಿಕ್ಕ ಗೆಳೆಯ. ಕೂಡಲೇ ರಿಕ್ವೆಸ್ಟ್ ಅಕ್ಸೆಪ್ಟ್ ಮಾಡಿ, ಮೆಸೇಜ್ ಕಳಿಸಿದೆ. ಅಷ್ಟೊತ್ತಿಗೆ ಜಯಂತನ್ ಆರ್ಮಿಯಲ್ಲಿ ಕೆಲಸಕ್ಕೆ ಸೇರಿದ್ದ. ಅಲ್ಲಿಗೆ ಮತ್ತೆ ಆರಂಭವಾದ ಸ್ನೇಹ ಮೆಸೆಂಜರ್‌ನಲ್ಲೇ ಮುಂದುವರಿಯಿತು. ಆರ್ಮಿ ಸೇರಲು ಮಾಡಿಕೊಳ್ಳಬೇಕಾದ ತಯಾರಿ, ಅಲ್ಲಿನ ನಿಯಮಗಳು, ಕೆಲಸದ ಥ್ರಿಲ್‌ಗಳನ್ನು ಜಯಂತನ್ ಹೇಳಿಕೊಳ್ಳುತ್ತಿದ್ದ.

ಅವನ ಮನದೊಳಗೆದ್ದ ಅನುರಾಗ ರಿಂಗಣ ನನ್ನೆದೆಗೂ ತಲುಪಿತು. ಒಪ್ಪಿಕೊಳ್ಳಲೂ ಆಗದ, ಇಲ್ಲ ಎನ್ನಲೂ ಆಗದ ಸಂದಿಗ್ಧಕ್ಕೊಳಗಾದೆ ನಾನು. ಎರಡೂ ಮನೆಯಲ್ಲಿ ಎದುರಾಗಬಹುದಾದ ಅಡೆ–ತಡೆಗಳ ಬಗ್ಗೆ ಚರ್ಚಿಸಿದೆವು. ನನಗೇ ಹೆಚ್ಚು ದಿಗಿಲಿತ್ತು. 'ಎರಡೂ ಮನೆಯವರು ಒಪ್ಪಿದರೆ ಮದುವೆ ಆಗೋಣ. ಅವರನ್ನು ನೋಯಿಸಿ ನಾವು ಬದುಕು ಕಟ್ಟಿಕೊಳ್ಳುವುದರಲ್ಲೇನಿದೆ?' ಎಂದ ಆತ. ಅವರ ಮನೆಯಲ್ಲಿ ಒಂದೇ ಬಾರಿಗೆ ನನ್ನನ್ನು ಸೊಸೆ ಎಂದು ಒಪ್ಪಿಕೊಂಡರು. ಆದರೆ ನಮ್ಮ ಮನೆಯಲ್ಲಿ ಬೇರೆ ರಾಜ್ಯ, ಬೇರೆ ಭಾಷೆ, ಹೇಗೊ ಏನೊ ಎನ್ನುವ ಅಳುಕಿತ್ತು. ರಾಶಿ–ನಕ್ಷತ್ರ ನೋಡಬೇಕು, ಕುಂಡಲಿ ಕೂಡುತ್ತದೋ ಇಲ್ಲವೋ ಎನ್ನುವ ತಳಮಳವಿತ್ತು. ಮನಸು–ಮನಸು ಕೂಡಿದ ಮೇಲೆ ಕುಂಡಲಿ ಕೂಡುವುದೇನು? ಆದರೂ ಅಮ್ಮನ ಸಮಾಧಾನಕ್ಕೆ ಆಗಲಿ, ಅದನ್ನೂ ನೋಡಿ ಅಂದೆ.

ದೇವತೆಗಳು ಅಸ್ತು ಅಂದರೇನೊ... 2018ರಲ್ಲಿ ಮದುವೆಯಾಯಿತು.

ನಮ್ಮಿಬ್ಬರನ್ನು ಮತ್ತೆ ಒಂದುಮಾಡಿ, ಎರಡೂ ಮನಸುಗಳನ್ನು ಹತ್ತಿರ ತಂದಿದ್ದು ಫೇಸ್‌ಬುಕ್. ಅದು ಇಲ್ಲದಿದ್ದರೆ ಬಹುಶಃ ನಾವು ಮತ್ತೆ ಭೇಟಿಯಾಗುತ್ತಿರಲಿಲ್ಲವೇನೊ...

–ಸಂಜನಾ ಜಯಂತನ್

ಮನೆ, ಇವೆಲ್ಲಕ್ಕೂ ದೊಡ್ಡದಾದ ನಿಶಾಂತ್ ಮನಸ್ಸು – ಪ್ರತಿಮಾಗೆ ಇದ್ಯಾವುದೂ ಹೊಸದೆನ್ನಿಸಲೇ ಇಲ್ಲ. ಫೇಸ್‌ಬುಕ್ ಮೂಲಕವೇ ಇವೆಲ್ಲ ಅವಳಲ್ಲಿ ಜೀವಂತವಾಗಿದ್ದವು. ನಿಶಾಂತ್ ಮನೆಯವರು ತೋರಿದ ಪ್ರೀತಿ–ಆದರಕ್ಕೆ ಪ್ರತಿಮಾ ಸೋತುಹೋದಳು. ತನ್ನ ಮನೆಯವರ ವಿರೋಧದ ನಡುವೆಯೂ ಪಾಕಿಸ್ತಾನದ ಸೊಸೆಯಾದಳು. ಫೇಸ್‌ಬುಕ್ ಪುಟಗಳಲ್ಲಿ ಪ್ರತಿಮಾ–ನಿಶಾಂತ್ ಅವರದ್ದೊಂದು ವಿಶೇಷ ಪ್ರೇಮಪುಟ.

### ಕಥೆ 2: ಗಡಿ ಮೀರಿದ ಪ್ರೇಮ

ಸಾಗರದಾಚೆಗಿನ ಕರೇನ್ ಲಿಲಿಯನ್‌ಗೆ 65 ವರ್ಷ. ಹರಿಯಾಣದ ಪ್ರವೀಣ್‌ಗೆ 27ರ ಹರೆಯ. ಫೇಸ್‌ಬುಕ್ ಸ್ನೇಹ ಬಿಡಿಸದ ಬಾಂಧವ್ಯವಾದದ್ದು ಕಳೆದ ವರ್ಷವಷ್ಟೇ.

ಕಳೆದ ಜುಲೈನಲ್ಲಿ ಎಲ್ಲಾ ವೈರುಧ್ಯಗಳ ನಡುವೆಯೇ ಅಪರೂಪದ ಈ ವಿಚಿತ್ರ ಜೋಡಿ ವಿವಾಹಬಂಧನಕ್ಕೆ ಒಳಗಾಗಿದ್ದಾರೆ. ಪ್ರವೀಣ್ ಅಮೆರಿಕ ಪ್ರಜೆಯಾಗಲು ಸಿದ್ಧನಿದ್ದಾನೆ. ಒಂದು ವೇಳೆ ಅದು ಸಾಧ್ಯವಾಗದೇ ಹೋದಲ್ಲಿ, ಕರೇನ್ ಭಾರತೀಯ ಸೊಸೆಯಾಗಿ ಚಂಡೀಗಡ ನಿವಾಸಿಯಾಗಲಿದ್ದಾರೆ.

### ಕಥೆ 3: ಸುಮಿತಾ ವೆಡ್ಸ್ ಅನೂಜ್

ತುಮಕೂರಿನ ಸುಮಿತಾ ಒಂದು ದಿನ ಫೇಸ್‌ಬುಕ್ ಮೂಲಕ ತನ್ನ ಶಾಲಾ ಸ್ನೇಹಿತರನ್ನೆಲ್ಲ ಕಾಣುವ ಪ್ರಯತ್ನದಲ್ಲಿದ್ದಳು. ಶಾಲಾ ಸ್ನೇಹಿತ ಅನೂಜ್‌ಗೆ ಕಳಿಸಿದ 'ಫ್ರೆಂಡ್ ರಿಕ್ವೆಸ್ಟ್' ಬೇರೆಯದೇ ಅನೂಜ್‌ಗೆ ಹೋಗಿ, ಅವನದನ್ನು ಅಕ್ಸೆಪ್ಟ್ ಕೂಡ ಮಾಡಿಕೊಂಡ. ಇಬ್ಬರೂ ಆತ್ಮೀಯರಾದರು. ಸೌಜನ್ಯದ ಗಡಿ ದಾಟದ ಅನೂಜ್‌ನ ಹಾಸ್ಯಪ್ರಜ್ಞೆ, ಮಾತಿನ ಧಾಟಿ ಸುಮಿತಾಗೆ ಮೆಚ್ಚುಗೆಯಾಯಿತು. ಮನೆಯವರು ತೋರುವ ವರಮಹಾಶಯರಲ್ಲೆಲ್ಲ ಸುಮಿತಾ ಅನೂಜ್‌ನನ್ನೇ ಹುಡುಕಿ ಹುಡುಕಿ ಸೋತಳು. ನಾಲ್ಕು ವರ್ಷಗಳ ಹುಟುಕಾಟದಲ್ಲಿ ಅವಳಿಗೆ ಇನ್ನೊಬ್ಬ ಅನೂಜ್ ಸಿಗಲಿಲ್ಲ. ಮನದಲ್ಲಿ ಕೂತ ಅನೂಜ್ ಬೇರೆಯವರನ್ನು ಒಪ್ಪಿಕೊಳ್ಳಲು ಅವಕಾಶ ಕೊಡಲೇ ಇಲ್ಲ. ಅದೊಂದು ದಿನ ದೆಹಲಿಗೆ ಬಂದ ಗೆಳತಿ ಸುಮಿತಾಳನ್ನು ಸಿನಿಮಾ–ಪಾರ್ಕು ಎಂದು ಕರೆದೊಯ್ಯುವ ಬದಲು ಸಂಗೀತ ಕಛೇರಿಗೆ ಕರೆದುಕೊಂಡು ಹೋದ. ಹಿತವಾದ ಸಂಗೀತದ ನಡುವೆ ಸುಮಿತಾ ಅನೂಜ್‌ನ ಕೈಗೆ ತನ್ನ ಕೈ ಸೇರಿಸಿದಳು. ಅಲ್ಲಿ ಮಾತು ಬೇಕೆನಿಸಲಿಲ್ಲ. ಪ್ರೀತಿ ಫಲಿಸಿತು. ಆ ಪ್ರೀತಿಗೆ ಸಾಕ್ಷಿಯಾಗಿ ಸಂಜ್ನಾ ಹುಟ್ಟಿದ್ದಾಳೆ.

ಫೇಸ್‌ಬುಕ್‌ನ ಒಂದೂವರೆ ದಶಕಗಳ ಇತಿಹಾಸದ ಪುಟಪುಟಗಳಲ್ಲೂ ಇಂಥ ಪ್ರೇಮದ ನವಿಲುಗರಿಗಳು ಕಾಣುತ್ತವೆ. ಹಾಗೆಯೇ ಕೆಲವು ಚಿತ್ರವಿಚಿತ್ರ, ನಂಬಲಾಗದ ವಿಲಕ್ಷಣ ವೃತ್ತಾಂತಗಳೂ ಇದೇ ಫೇಸ್‌ಬುಕ್ ಖಾತೆಗಳ ಕಾರಣ ನಡೆದುಹೋಗಿವೆ.

### ಕಥೆಯಲ್ಲ, ಇದು ವ್ಯಥೆ

ಪ್ರೀತಿಗಾಗಿ ಹಾತೊರೆದು, ಪ್ರೇಮಭಿಕ್ಷೆಗೆ ಮನಸೆಂಬ ಪಾತ್ರೆಯನೊಡ್ಡಿದ ಹೃದಯಗಳಿಗೆ ದೊರೆತ ವಂಚನೆಯ ಉಡುಗೊರೆಗಳೂ ಸಾಲು ಸಾಲು ಇವೆ. ಪ್ರೀತಿ ಎಂದರೇನೇ ನಂಬಿಕೆ. ಅಂತಹ ನಂಬಿಕೆಯನ್ನೇ ಗಾಳವಾಗಿ ಬಳಸಿಕೊಂಡು, ಮೈಯನ್ನೂ–ಮನವನ್ನೂ ಹಿಂಡಿದ ವಂಚಕರೂ ಇದ್ದಾರೆ ಇಲ್ಲಿ. ಮಾನವನ್ನೂ ಹಣವನ್ನೂ ಕಳೆದುಕೊಂಡು ಪೊಲೀಸ್ ಠಾಣೆಗಳೆದುರು ತಲೆತಗ್ಗಿಸಿ ನಿಂತವರಲ್ಲಿ ಹದಿಹರೆಯದವರೂ ಉಂಟು, ನಡುವಯಸ್ಸಿನ ಗೃಹಸ್ಥ–ಗೃಹಿಣಿಯರೂ ಉಂಟು. ಮನಸ್ಸೆನ್ನುವುದು ಮರ್ಕಟವೆಂದು ಅಕ್ಕ ಎಚ್ಚರಿಸಲಿಲ್ಲವೇ?

ರಾಧಾ, ಶ್ವೇತಾ, ಸ್ಮಿತಾ... ಹೆಸರು ಏನಾದರೂ ಅಂದುಕೊಳ್ಳಬಹುದು. ಅವಳ ಒಂದೊಂದು ಖಾತೆಗೂ ಒಂದೊಂದು ಬೇರೆಯದೇ ಹೆಸರು. ಆದರೆ ಆ ಯಾವ ಹೆಸರೂ ಅವಳದಲ್ಲ. ಹಾಗೆಯೇ ರಾಧಾ ಕುಲಕರ್ಣಿ ಎನ್ನುವ ಹೆಸರಿನಿಂದ ಫೇಸ್‌ಬುಕ್